# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 996
ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 21.09.2022
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆಯ, ಹಾಸನ ತಾಲ್ಲೂಕಿನಲ್ಲಿ 94 'ಸಿ' ಅಡಿಯಲ್ಲಿ ಕಳೆದ 3 ವರ್ಷದಲ್ಲಿ ಹಂಚಿಕೆ ಮಾಡಿರುವ ಮನೆಗಳೆಷ್ಟು; ಹಂಚಿಕೆಗೆ ಬಾಕಿ ಉಳಿದಿರುವ ಪ್ರಕರಣಗಳೆಷ್ಟು; (ವಿವರ ನೀಡುವುದು) | ಹಾಸನ ಜಿಲ್ಲೆಯ, ಹಾಸನ ತಾಲ್ಲೂಕಿನಲ್ಲಿ ಕಳೆದ 3 ವರ್ಷದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಸಿ ಅಡಿಯಲ್ಲಿ ಒಟ್ಟು 618 ಮನೆಗಳನ್ನು ಸಕ್ರಮಗೊಳಿಸಲಾಗಿದ್ದು, 4087 ಪ್ರಕರಣಗಳು ಬಾಕಿ ಇರುತ್ತವೆ. |
| (ಆ) | ಹಾಸನ ಜಿಲ್ಲೆಯ, ಹಾಸನ ತಾಲ್ಲೂಕಿನಲ್ಲಿ 94 'ಸಿ' ಅಡಿಯಲ್ಲಿ ಮನೆ ಹಂಚಿಕೆಗೆ ಆಯ್ಕೆ ಮಾಡಲು ಇರುವ ಮಾನದಂಡಗಳೇನು? (ವಿವರ ನೀಡುವುದು) | ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಸಿ ರಡಿ ಮನೆಗಳ್ನು ಸಕ್ರಮಗೊಳಿಸಲು ಇರುವ ಮಾನದಂಡಗಳು:-<br>➢ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸುವ ಸಂಬಂಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94ಸಿ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.<br>➢ ದಿನಾಂಕ:01-01-2015ರ ಪೂರ್ವದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ 30x40 ಅಡಿ, 40x60 ಮತ್ತು 50x80 ಅಡಿ ಅಳತೆಯ ವಾಸದ ಮನೆಗಳನ್ನು ಸಕ್ರಮಗೊಳಿಸಲು ಅವಕಾಶವಿದೆ. ಹಾಗೂ "One year from the last date prescribed for receipt for receipt of applications" ಇತ್ಯರ್ಥಪಡಿಸಲು ಅವಕಾಶವಿರುತ್ತದೆ.<br>➢ Prescribed authority- Tahslidar of the Taluk (KLR Rule 108-O)<br>➢ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ:31/03/2022ರವರೆಗೆ ಕಾಲಾವಕಾಶವನ್ನು ಕಲ್ಪಿಸಲಾಗಿತ್ತು.<br>➢ ಸ್ವೀಕರಿಸಿದ ಅರ್ಜಿಗಳನ್ನು ಇತ್ಯರ್ಥಪಡಿಸಲು ದಿನಾಂಕ:31.03.2023ರವರೆಗೆ ಅವಕಾಶವಿರುತ್ತದೆ.<br>➢ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಮಾತ್ರ ಸಕ್ರಮಗೊಳಿಸಲು |

| | | |
|---|---|---|
| | | ಅವಕಾಶವಿದ್ದು, ಈ ಕೆಳಕಂಡ ಭೂಮಿಯನ್ನು ಸಕ್ರಮ ಮಾಡಲು ಅವಕಾಶವಿರುವುದಿಲ್ಲ.<br><br>(ಎ) ನೈಸರ್ಗಿಕ ನೀರುಗಾಲುವೆಗಳು ಅಥವಾ ಕಣಿವೆ ಹಾದಿಗೆ ಅಡ್ಡಲಾಗಿ ಇದ್ದಾಗ;<br>(ಬಿ) ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಮಾಲೀಕತ್ವ ಅಥವಾ ನಿಯಂತ್ರಣ ಹೊಂದಿರುವ ಒಂದು ಪ್ರಾಧಿಕಾರಕ್ಕೆ ಸೇರಿದ್ದಾಗ;<br>(ಸಿ) ಪ್ರಸ್ತುತ ಇರುವ ಅಥವಾ ಉದ್ದೇಶಿತ ರಸ್ತೆಗಳು, ಒಳ ಅಥವಾ ಹೊರ ವರ್ತುಲ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು, ವರ್ತುಲ ರಸ್ತೆಗಳ ಮೇಲಿನ ಬೈಪಾಸುಗಳು ಸೇರಿದಂತೆ ರಸ್ತೆಗಳ ಅಗಲೀಕರಣಕ್ಕೆ ಪ್ರಸ್ತಾಪಿಸಲಾದ ಭೂಮಿ ಅಥವಾ ರೈಲ್ವೆ ಲೈನುಗಳು, ಟ್ರ್ಯಾಮ್‌ವೇಗಳು, ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ ಯೋಜನೆಗಳು ಸಂಪರ್ಕಗಳು, ಮತ್ತಿತರ ನಾಗರಿಕ ಸೌಲಭ್ಯಗಳು ಅಥವಾ ಸಾರ್ವಜನಿಕ ಸೌಲಭ್ಯಗಳಿಗೆ ಅಡ್ಡಲಾಗಿ ಬರುತ್ತಿದ್ದಾಗ;<br>(ಡಿ) ಅರಣ್ಯ ಭೂಮಿಯಾಗಿದ್ದಾಗ;<br>(ಇ) ಬೇರೊಬ್ಬ ವ್ಯಕ್ತಿಗೆ ಸೇರಿದ್ದು ಅರ್ಜಿದಾರನು ಅದರ ಮೇಲೆ ಯಾವುದೇ ಹಕ್ಕನ್ನು ಹೊಂದಿರದಿದ್ದಾಗ;<br>(ಎಫ್) ಅದನ್ನು ಉದ್ಯಾನವನಗಳು, ಆಟದ ಮೈದಾನಗಳು, ಬಯಲು ಜಾಗವಾಗಿ ಅಥವಾ ಯಾವುದೇ ನಾಗರಿಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಮೀಸಲಿರಿಸಿದ್ದಾಗ;<br>(ಜಿ) ಅಥವಾ ಕಟ್ಟಡವು ನೆರೆಯವರ ಸ್ವತ್ತಿಗೆ, ಮಳೆ ನೀರಿನ ಚರಂಡಿಗಳು, ಕೆರೆ ಅಂಗಳಗಳು, ನದಿಯ ಪಾತ್ರಗಳು ಅಥವಾ ನದಿ ತಳಗಳು ಹಾಗೂ ಕಾಲುವೆಗಳಿಗೆ ಒತ್ತಿಕೊಂಡಿದ್ದಾಗ ಅಥವಾ ಹೈಟೆನ್ಷನ್ ವಿದ್ಯುತ್ ಲೈನುಗಳ ಅಡಿಯಲ್ಲಿ ಬರುತ್ತಿದ್ದಾಗ;<br>(ಹೆಚ್) ಪಾರಂಪರಿಕ ಸ್ಮಾರಕಗಳು, ವಿಮಾನ ನಿಲ್ದಾಣಗಳು ಮತ್ತು ರಕ್ಷಣಾ ನಿಯಮಗಳ ವಲಯ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಎತ್ತರಗಳ ನಿರ್ಬಂಧನೆಗಳಿಗೆ ವಿರುದ್ಧವಾಗಿ ಅದರ ಬಳಕೆ ಇದ್ದಾಗ;<br>(ಐ) ಹೈಟೆನ್ಷನ್ ಲೈನುಗಳಿಂದ ಎಷ್ಟು ದೂರ ಇರಬೇಕು ಎಂಬ ನಿರ್ಬಂಧಕ್ಕೆ ಅಥವಾ ಅಗ್ನಿ ಆಕಸ್ಮಿಕ ರಕ್ಷಣಾ ಕ್ರಮಗಳಿಗೆ ಅನುಗುಣವಾಗಿ ಇರದಿದ್ದಾಗ;<br>(ಜೆ) ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಕರಾವಳಿ ವಲಯ ವಿನಿಯಮಗಳ ಪ್ರದೇಶದೊಳಗಡೆ ಇದ್ದಾಗ; |

(ಕಡತ ಸಂಖ್ಯೆ:ಕಂಇ 62 ಎಲ್‌ಜಿಹೆಚ್ 2022)

**(ಆರ್.ಅಶೋಕ)**
ಕಂದಾಯ ಸಚಿವರು